


# ಸಮಾಲೋಚನೆ ಎಂದರೆ ಕಪ್ಪುಚುಕ್ಕಿಯಲ್ಲ

**ಮಕ್ಕಳ ಮನದಲ್ಲಿ ಅಳುಕು ಮೂಡದಂತೆ ಪರಿಸ್ಥಿತಿಯನ್ನು ನಿರ್ವಹಿಸಿದರೆ ಎಷ್ಟೋ ಬಿಕ್ಕಟ್ಟುಗಳು ಮಾತುಕತೆಯಲ್ಲಿ, ಸಮಾಲೋಚನೆಯಲ್ಲಿ ಬಗೆಹರಿದುಬಿಡುತ್ತವೆ.**

■ ಸ್ವಯಂಪ್ರಭಾ

ಪುಟಾಣಿ ಮಕ್ಕಳಿಗೆ ಚಿಕಿತ್ಸೆ ಕೊಡಿಸುವುದು ಸುಲಭದ ಮಾತಲ್ಲ. ಬಿಸಿಜಿ ಇಂಜೆಕ್ಷನ್ ಕೊಡಿಸುವ ಸಂದರ್ಭದಿಂದ ಹಿಡಿದು, ಜ್ವರ–ಕೆಮ್ಮು ಮುಂತಾಗಿ ಮಗುವಿನ ಆರೋಗ್ಯದ ಹದ ತಪ್ಪಿದಾಗ ಅವರನ್ನು ವೈದ್ಯರ ಬಳಿಗೆ ಕರೆದುಕೊಂಡು ಹೋಗುವುದು ಎಷ್ಟೊಂದು ತ್ರಾಸದ ಕೆಲಸ ಎನ್ನುವುದು ಎಲ್ಲ ಪೋಷಕರಿಗೂ ಅರಿವಿರುವಂತಹುದೇ.

‘ಪಾರ್ಕಿಗೆ ಹೋಗೋಣ, ಜಾರುಬಂಡಿಯಲ್ಲಿ ಆಡೋಣ’ ಎಂದೆಲ್ಲ ರಮ್ಯಕತೆಗಳನ್ನು ಹೇಳಿದ ಬಳಿಕವೇ ಮಕ್ಕಳು ಮನೆಯಿಂದ ಹೊರಡಲು ಮನಸ್ಸು ಮಾಡುವುದು. ಅರ್ಧದಾರಿಗೆ ತೆರಳಿದ್ದೇ, ತಾವು ವೈದ್ಯರ ಬಳಿಗೆ ಹೋಗುತ್ತಿರುವುದು ಅರಿವಿಗೆ ಬಂದ ಕೂಡಲೇ ಕಿಟಾರನೆ ಕಿರುಚಲು ಶುರು ಮಾಡುತ್ತಾರೆ. ಅವರನ್ನು ರಮಿಸುತ್ತಾ ಪ್ರಯಾಣಿಸಬೇಕಾಗುತ್ತದೆ. ಕ್ಲಿನಿಕ್ ತಲುಪಿದ ನಂತರ ಸರದಿಯಲ್ಲಿ ಕಾಯುವ ಸಂದರ್ಭದಲ್ಲೂ ವೈದ್ಯರನ್ನು ಭೇಟಿಯಾಗುವುದಕ್ಕೆ ಮಕ್ಕಳು ಹಿಂದೇಟು ಹಾಕುತ್ತಾರೆ. ಇಂತಹುದನ್ನೆಲ್ಲ ನಿರ್ವಹಿಸುವುದು ಹೇಗೋ ಏನೋ ಸಾಧ್ಯವಾದರೂ, ಮಾನಸಿಕ ಚಿಕಿತ್ಸೆಗೆ ಅಥವಾ ಅಭ್ಯಾಸಗಳ ಸುಧಾರಣೆಗಾಗಿ, ಮಕ್ಕಳನ್ನು ಸಮಾಲೋಚನೆಗಾಗಿ (ಕೌನ್ಸೆಲಿಂಗ್‌ಗಾಗಿ) ಕರೆದುಕೊಂಡು ಹೋಗುವುದು ಸಾಹಸದ ಕೆಲಸ.

ಮಾನಸಿಕ ಚಿಕಿತ್ಸೆಗೋಸ್ಕರ ಮಕ್ಕಳನ್ನು ವೈದ್ಯರ ಬಳಿಗೆ ಕರೆದುಕೊಂಡು ಹೋಗಬೇಕು ಎಂಬ ಸತ್ಯವನ್ನು ಅರಗಿಸಿಕೊಳ್ಳಲು ಪೋಷಕರೇ ಬಹಳ ಕಷ್ಟಪಡುತ್ತಾರೆ. ‘ಮನಃಶಾಸ್ತ್ರಜ್ಞರು’ ಎಂಬ ಬೋರ್ಡ್ ಇರುವ ಕ್ಲಿನಿಕ್‌ಗೆ ತಾವು ಹೋಗುವುದನ್ನು, ಮಕ್ಕಳನ್ನು ಕರೆದುಕೊಂಡು ಹೋಗುವ ಸಂದರ್ಭಗಳನ್ನು ಸಾಧ್ಯವಾದಷ್ಟೂ ತಪ್ಪಿಸಲು ಪ್ರಯತ್ನಿಸುತ್ತಾರೆ. ಆದರೆ ಎಷ್ಟೋ ಸಮಸ್ಯೆಗಳು ಕೇವಲ ಸಮಾಲೋಚಕರೊಡನೆ ಒಂದು ಸುತ್ತಿನ ಮಾತುಕತೆಯಿಂದ ಬಗೆಹರಿಯುವಂತಿರುತ್ತವೆ.

ಸಾಕೇತ್ ಐದನೇ ತರಗತಿಯಲ್ಲಿರುವಾಗ ಅವನ ಅಕ್ಷರಗಳು ಸುಂದರವಾಗಿರಲಿಲ್ಲ. ಏಳನೇ ತರಗತಿಯಲ್ಲಿಯೂ ಅಕ್ಷರಗಳು ಸುಂದರವಾಗಿಲ್ಲದೇ ಇರುವುದನ್ನು ಕಂಡು ಅವನ ತಂದೆಗೆ ಬಹಳ ಚಿಂತೆಯಾಯಿತು. ಕೆಲವು ಅಕ್ಷರಗಳನ್ನು ಅವನು ಆಗಾಗ ತಪ್ಪು ತಪ್ಪಾಗಿ ಬರೆಯುತ್ತಿದ್ದ. ‘ಎಸ್’ ಮತ್ತು 5 ಅಂಕೆಯನ್ನು ತಪ್ಪಾಗಿ ಗ್ರಹಿಸುವುದು, ‘ಪಿ’ ಅಕ್ಷರವನ್ನು ಉಲ್ಟಾ ಬರೆಯುವುದನ್ನು ಕಂಡು, ಮಗ ಡಿಸಲೆಕ್ಸಿಯಾದ ಸಮಸ್ಯೆ ಎದುರಿಸುತ್ತಿರಬಹುದೆಂದು ಸಾಕೇತ್ ತಂದೆಗೆ ಚಿಂತೆ ಕಾಡಿತು. ದೊಡ್ಡ ತರಗತಿಗಳಿಗೆ ಹೋದಂತೆ ಅವನ ಬರವಣಿಗೆ ಸಾಮರ್ಥ್ಯವು ವೃದ್ಧಿಸದೇ ಇದ್ದರೆ ಶಿಕ್ಷಣಕ್ಕೆ ತೊಡಕಾಗುತ್ತದೆ ಎಂಬ ಕಾರಣದಿಂದ, ಸಮಸ್ಯೆಗೊಂದು ಪರಿಹಾರ ಕಂಡುಹಿಡಿಯಲು ಪ್ರಯತ್ನಿಸಿದರು.

ಮಗನನ್ನು ಸಮಾಲೋಚಕರ ಬಳಿಗೆ ಕರೆದುಕೊಂಡು ಹೋದರೆ ಉತ್ತಮ ಎಂಬ ಸಲಹೆಗಳು ವ್ಯಕ್ತವಾದಾಗ ಅವರ ಚಿಂತೆ ಮತ್ತಷ್ಟು ಹೆಚ್ಚಾಯಿತು. ಇಂತಹುದೊಂದು ಭೇಟಿ ಅವನ ಮನಸ್ಸಿನ ಮೇಲೆ ಪರಿಣಾಮ ಬೀರಿದರೆ ಏನು ಮಾಡುವುದು ಎಂದು ಅರಿಯದೇ, ಕೊನೆಗೆ ಒಂದು ಉಪಾಯ ಮಾಡಿದರು. ಸಮಾಲೋಚಕರ ಬಳಿ ಒಂದು ಅಪಾಯಿಂಟ್‌ಮೆಂಟ್ ತೆಗೆದುಕೊಂಡು, ತಾವೊಬ್ಬರೇ ತೆರಳಿ, ಮಗನ ಸಮಸ್ಯೆಯನ್ನು ವಿವರಿಸಿದರು. ಆ ಸಂದರ್ಭದಲ್ಲಿ ವೈದ್ಯರಿಗೊಂದು ಪುಸ್ತಕವನ್ನು ಕೊಟ್ಟು, ‘ಮಗನ ಜೊತೆಗೆ ಇಲ್ಲಿಗೆ ಬಂದಾಗ ಈ ಪುಸ್ತಕವನ್ನು ಪಡೆಯುವೆ’ ಎಂದು ತಿಳಿಸಿದರು. ವೈದ್ಯರೂ ಹೆಚ್ಚು ಪ್ರತಿಕ್ರಿಯಿಸದೇ ಒಪ್ಪಿಗೆ ನೀಡಿದರು.

ಸಾಕೇತ್‌ನನ್ನು ಕರೆದುಕೊಂಡು ಒಂದು ದಿವಸ ಶಾಪಿಂಗ್ ಹೋಗುವಾಗ ದಾರಿಮಧ್ಯೆ ಬೈಕ್ ನಿಲ್ಲಿಸಿ, ‘ಇಲ್ಲೇ ವೈದ್ಯರ ಬಳಿಯೊಂದು ಪುಸ್ತಕ ತೆಗೆದುಕೊಳ್ಳಬೇಕಿದೆ. ನೀನಿಲ್ಲೇ ಬೈಕ್ ಹತ್ರ ನಿಲ್ತೀಯಾ? ನಾನು ಕ್ಲಿನಿಕ್ ಒಳಗೆ ಹೋಗಿಬರುವೆ’ ಎಂದು ಕೇಳಿದರು. ಸಾಕೇತ್, ‘ನಾನೂ ಬರ್ತೀನಪ್ಪಾ’ ಎಂದು ಅಪ್ಪನನ್ನು ಹಿಂಬಾಲಿಸಿದ.

ವೈದ್ಯರಿಗಾಗಿ ಕಾಯುತ್ತಿದ್ದ ಒಂದಿಬ್ಬರ ಸಮಾಲೋಚನೆಯ ಬಳಿಕ ಸಾಕೇತ್ ಮತ್ತು ಅವನ ತಂದೆ ವೈದ್ಯರ ಕ್ಯಾಬಿನ್ ಒಳಗೆ ಹೋಗಿ, ಅವರನ್ನು ಭೇಟಿಯಾದರು. ‘ಪುಸ್ತಕವನ್ನು ತೆಗೆದುಕೊಂಡು ಹೋಗಲು ಬಂದೆ, ಚೆನ್ನಾಗಿದ್ದೀರಾ ಡಾಕ್ಟರೇ’ ಎಂದು ತಂದೆಯೇ ಕುಶಲೋಪರಿ ಆರಂಭಿಸಿದರು. ವೈದ್ಯರೂ ಅದೇ ಮಾದರಿಯಲ್ಲಿ ಪ್ರಶ್ನಿಸುತ್ತಾ, ‘ಏನು ಓದುತ್ತಿದ್ದೀ ಸಾಕೇತ್…’ ಎಂದು ಮಾತು ಶುರು ಮಾಡಿದರು. ಹಸ್ತಾಕ್ಷರದ ವಿಚಾರವೂ ಮಾತಿನಲ್ಲಿ ಸೇರಿಕೊಂಡು ವೈದ್ಯರು ಇನ್ನೊಂದಷ್ಟು ಪ್ರಶ್ನೆಗಳನ್ನು ಕೇಳಿದರು. ‘ಓ… ಅಷ್ಟೇನಾ, ಹದಿನೈದು ದಿವಸ ಇದೊಂದು ಅಭ್ಯಾಸ ಮಾಡು…’ ಎಂದು ಕೆಲವು ತಂತ್ರಗಳನ್ನು ಹೇಳಿಕೊಟ್ಟರು.

ಆ ಒಂದು ಭೇಟಿಯು ಸಾಕೇತ್‌ನಲ್ಲಿ ಎಷ್ಟೊಂದು ಬದಲಾವಣೆಗಳನ್ನು ತಂದಿತೆಂದರೆ, ಅವನ ಕಲಿಕಾ ಸಾಮರ್ಥ್ಯವು ಗಣನೀಯವಾಗಿ ವೃದ್ಧಿಯಾಯಿತು. ಎಂಟನೇ ತರಗತಿಯಲ್ಲಿ ಅವನ ಅಕ್ಷರಗಳು ಸುಧಾರಿಸಿ ಓದುವುದಕ್ಕೆ ಸಾಧ್ಯವಾಗುವಷ್ಟು ಸುಧಾರಿಸಿದವು. ತನ್ನ ಪ್ರಗತಿಯ ಬಗ್ಗೆ ತಿಳಿಸಲು ಅನೇಕ ಬಾರಿ ಕ್ಲಿನಿಕ್ ಗೆ ಅಪ್ಪ ಮತ್ತು ಮಗ ಜೊತೆಯಾಗಿ ಭೇಟಿ ನೀಡಿದರು.

ಕಲಿಕೆಯ ವಿಧಾನವನ್ನು ಸುಧಾರಣೆ ಮಾಡಿಕೊಳ್ಳಲು ಅಪ್ಪನ ಸ್ನೇಹಿತರೊಬ್ಬರ ನೆರವು ಪಡೆಯುತ್ತಿದ್ದೇನೆ ಎಂಬ ವಿಶ್ವಾಸದೊಂದಿಗೆ ಸಾಕೇತ್ ಅಳುಕಿಲ್ಲದೇ ವೈದ್ಯರನ್ನು ಭೇಟಿಯಾಗುತ್ತಿದ್ದ. ‘ಮಗನ ಮನಸ್ಸಿಗೆ ನೋವಾಗಬಾರದು, ಆದರೆ ಅಗತ್ಯ ಸಮಾಲೋಚನೆಯು ಅವನಿಗೆ ದೊರೆಯಬೇಕು’ ಎಂಬ ಉದ್ದೇಶ ಅವನ ತಂದೆಯದು.

ಮಕ್ಕಳ ಮನದಲ್ಲಿ ಅಳುಕು ಮೂಡದಂತೆ ಪರಿಸ್ಥಿತಿಯನ್ನು ನಿರ್ವಹಿಸಿದರೆ ಎಷ್ಟೋ ಬಿಕ್ಕಟ್ಟುಗಳು ಮಾತುಕತೆಯಲ್ಲಿ, ಸಮಾಲೋಚನೆಯಲ್ಲಿ ಬಗೆಹರಿದುಬಿಡುತ್ತವೆ.

**ಪ್ರತಿಕ್ರಿಯಿಸಿ: feedback@sudha.co.in**